ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ದಿನಾಂಕ : DATE : 1/4/21
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

## ಇಲಾಖೆಯಲ್ಲಿ ಯಡಿಯೂರಪ್ಪ ಹಸ್ತಕ್ಷೇಪ: ರಾಜ್ಯಪಾಲ, ಹೈಕಮಾಂಡ್‌ಗೆ ದೂರು

# ಸಿಎಂ ವಿರುದ್ಧ ಈಶ್ವರಪ್ಪ ರೆಬೆಲ್

**ವಿಕ ಸುದ್ದಿಲೋಕ** ಬೆಂಗಳೂರು 1/4/21

ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರ ವಿರುದ್ಧ ಸಂಪುಟದ ಹಿರಿಯ ಸಚಿವ ಕೆ ಎಸ್ ಈಶ್ವರಪ್ಪ ಅವರು ಬಹಿರಂಗವಾಗಿ ಬಂಡಾಯ ಸಾರುವುದರೊಂದಿಗೆ, ಇವರಿಬ್ಬರ ನಡುವೆ ಹಲವು ದಿನಗಳಿಂದ ನಡೆಯುತ್ತಿದ್ದ ಶೀತಲ ಸಮರ ಈಗ ಸ್ಫೋಟಿಸಿದಂತಾಗಿದೆ.

''ಸಂಪುಟದ ಹಿರಿಯ ಸದಸ್ಯನಾದ ನನ್ನ ಇಲಾಖೆಯಲ್ಲಿ ಸಿಎಂ ಯಡಿಯೂರಪ್ಪ ನೇರವಾಗಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಇದರಿಂದ ನನಗೆ ಮುಜುಗರವಾಗಿದೆ,'' ಎಂದು ಆರೋಪಿಸಿ ರಾಜ್ಯಪಾಲರು ಹಾಗೂ ಬಿಜೆಪಿ ಹೈಕಮಾಂಡ್‌ಗೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ ದೂರು ಸಲ್ಲಿಸಿದ್ದಾರೆ.

ಸಿಎಂ ವಿರುದ್ಧ ಸಂಪುಟದ ಹಿರಿಯ ಸದಸ್ಯರೊಬ್ಬರು ರಾಜ್ಯಪಾಲರು ಮತ್ತು ಪಕ್ಷದ ವರಿಷ್ಠರಿಗೆ ದೂರು ನೀಡಿರುವುದು ಅಪರೂಪದ, ಮಹತ್ವದ ಬೆಳವಣಿಗೆಯಾಗಿದೆ. ಬಿಎಸ್‌ವೈ ಮತ್ತು ಈಶ್ವರಪ್ಪ ನಡುವಿನ ಬಾಂಧವ್ಯ ಹಳಸಿದೆ ಎಂಬ ಮಾತು ಇತ್ತೀಚೆಗೆ ಕೇಳಿ ಬಂದಿತ್ತು. ಅದಕ್ಕೆ ಪುಷ್ಟಿ ನೀಡುವಂತೆ ಸಭೆ, ಸಮಾರಂಭಗಳಲ್ಲಿ ಸಿಎಂ ಅವರಿಂದ ಈಶ್ವರಪ್ಪ ಅಂತರ ಕಾಯ್ದುಕೊಂಡು ಬಂದಿದ್ದರು. ಇದೀಗ ಮತ್ತೊಂದು ಹೆಜ್ಜೆ ಮುಂದೆ ಹೋಗಿರುವ ಅವರು, ಸಿಎಂ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇದರಿಂದ ಪ್ರತಿಪಕ್ಷಗಳ ಬಾಯಿಗೂ ಆಹಾರವಾದಂತಾಗಿದೆ. ಉಪ ಚುನಾವಣೆ ಅಖಾಡದಲ್ಲಿ ಸರಕಾರದ ವಿರುದ್ಧ ವಾಗ್ದಾಳಿ ನಡೆಸಲು ಪ್ರತಿಪಕ್ಷಗಳಿಗೆ ಅಸ್ತ್ರವೂ ಸಿಕ್ಕಂತಾಗಿದೆ. »03

ಒಳಜಗಳ ಸಾಕು, ಅಭಿವೃದ್ಧಿ ಬೇಕು
ಸಂಪಾದಕೀಯ »06

### ದೂರಿನ ಸಾರವೇನು?

- ಗ್ರಾಮೀಣ ಸುಮಾರ್ಗಕ್ಕೆ ಸಿಎಂ ಯಡಿಯೂರಪ್ಪರಿಂದ ಕೊಕ್ಕೆ
- ಸಚಿವರ ಗಮನಕ್ಕೆ ತಾರದೆ 81 ಕ್ಷೇತ್ರಗಳಿಗೆ ಸಂಬಂಧಿಸಿ 775 ಕೋಟಿ ರೂ. ವಿಶೇಷ ಅನುದಾನ
- ಬಿಡುಗಡೆಗೆ ಬಾಕಿಯಿರುವ ಮೊತ್ತ 2,398.18 ಕೋಟಿ ರೂ.
- ಬಿಜೆಪಿಗಿಂತ ಪ್ರತಿಪಕ್ಷ ಶಾಸಕರಿಗೇ ಹೆಚ್ಚಿನ ಅನುದಾನ ಬಿಡುಗಡೆ



### ನೇರ ಬಿಡುಗಡೆ ಮಾಡಬೇಕಿತ್ತು

ಗ್ರಾಮೀಣಾಭಿವೃದ್ಧಿ ಬಗ್ಗೆ ಕಾಳಜಿಯಿದ್ದು, ಹೆಚ್ಚುವರಿ ಅನುದಾನ ನೀಡುವ ಅಪೇಕ್ಷೆಯಿದ್ದಿದ್ದರೆ ನೇರವಾಗಿ ಸಂಬಂಧಿಸಿದ ಇಲಾಖೆಗೇ ಅನುದಾನ ಬಿಡುಗಡೆ ಮಾಡಬೇಕಿತ್ತು. ಇದರಿಂದಾಗಿ ಹೆಚ್ಚು ದಿನ ಉಳಿಯುವ ಹಾಗೂ ಗುಣಮಟ್ಟದ ಮೂಲಸೌಕರ್ಯ ನಿರ್ಮಿಸಲು ಸಾಧ್ಯ ಎಂದು ಸಚಿವ ಈಶ್ವರಪ್ಪ ಹೇಳಿದ್ದಾರೆ.

### ಆಡಳಿತ ಶೈಲಿ ಬದಲಾಗಲಿ

ಫೆಬ್ರವರಿ 17ರ ಆದೇಶದಲ್ಲಿ ಬಿಜೆಪಿಯ 32, ಕಾಂಗ್ರೆಸ್, 30, ಜೆಡಿಎಸ್‌ನ 18, ಬಿಎಸ್‌ಪಿಯ 1 ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಅನುದಾನ ನೀಡಲಾಗಿದೆ. ಆಡಳಿತ ಪಕ್ಷಕ್ಕಿಂತ ಬೇರೆ ಪಕ್ಷದವರ ಕ್ಷೇತ್ರಗಳಿಗೆ ಹೆಚ್ಚು ಅನುದಾನ ನೀಡಿದೆ ಆರೋಪ ಬಂದಿದೆ. ಇದರಿಂದಾಗಿ ಪಕ್ಷದ ಶಾಸಕರು, ಮುಖಂಡರು, ಕಾರ್ಯಕರ್ತರ ಮುಂದೆ ಮುಜುಗರಕ್ಕೆ ಒಳಗಾಗುವಂತಾಗಿದೆ. ಪಕ್ಷ ಅಧಿಕಾರದಲ್ಲಿರುವಾಗ ಇಂತಹ ಸನ್ನಿವೇಶ ಬಂದಿರುವುದು ಒಳ್ಳೆಯದಲ್ಲ. ಈ ಆಡಳಿತ ಶೈಲಿಯನ್ನು ಬದಲಾಯಿಸಬೇಕು ಎಂದು ಸಚಿವ ಈಶ್ವರಪ್ಪ ಒತ್ತಾಯಿಸಿದ್ದಾರೆ.

> ಇದು ಪಕ್ಷದ ಆಂತರಿಕ ವಿಚಾರ. ಸಮಸ್ಯೆಯನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆ.
> **- ಕೆ ಎಸ್ ಈಶ್ವರಪ್ಪ**
> ಗ್ರಾಮೀಣಾಭಿವೃದ್ಧಿ ಸಚಿವ

### ಇದೇ ಮೊದಲಲ್ಲ

ಯಡಿಯೂರಪ್ಪ ಮತ್ತು ಈಶ್ವರಪ್ಪ ಹಳೆಯ ಸ್ನೇಹಿತರು. ಈ ನಡುವೆಯೂ ಇಬ್ಬರ ಮಧ್ಯೆ ಸಾಕಷ್ಟು ಬಾರಿ ಮನಸ್ತಾಪವಾಗಿದೆ. ಈ ಹಿಂದೆ ಬಿಎಸ್‌ವೈ ಸಂಪುಟದಲ್ಲಿ ಇಂಧನ ಸಚಿವರಾಗಿದ್ದಾಗಲೂ ಈಶ್ವರಪ್ಪ ಮುನಿಸಿಕೊಂಡಿದ್ದರು. ನಂತರ ಸಚಿವ ಸ್ಥಾನ ತೊರೆದು ರಾಜ್ಯ ಬಿಜೆಪಿ ಅಧ್ಯಕ್ಷರ ಜವಾಬ್ದಾರಿ ವಹಿಸಿಕೊಂಡಿದ್ದರು. ಇದಲ್ಲದೆ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಯಡಿಯೂರಪ್ಪ ರಾಜ್ಯ ಬಿಜೆಪಿ ಅಧ್ಯಕ್ಷರಾದರು. ಆಗ ಈಶ್ವರಪ್ಪ ಹಿಂದ ಸಂಘಟನೆ ನಡೆಸಿದ್ದರು. ರಾಯಣ್ಣ ಬ್ರಿಗೇಡ್ ಕಟ್ಟಿದ್ದರು. ಈ ಬಾರಿ ಸಚಿವರಾಗಿ ಸರಕಾರದ ಭಾಗವಾಗಿದ್ದರೂ ಕುರುಬರ ಎಸ್‌ಟಿ ಮೀಸಲು ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತಿದ್ದರು.

> ಸಿಎಂ ಯಡಿಯೂರಪ್ಪ ವಿರುದ್ಧ ಗಂಭೀರ ಆರೋಪ ಹೊರಿಸಿರುವ ಹಿರಿಯ ಸಚಿವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಹಾಗಾಗಿ ಸಿಎಂ ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಆರೋಪ ಮಾಡಿರುವ ಸಚಿವರನ್ನು ಸಂಪುಟದಿಂದ ವಜಾ ಮಾಡಬೇಕು. ರಾಜ್ಯದ ಬಿಜೆಪಿ ಸರಕಾರ ಭ್ರಷ್ಟಾಚಾರದ ಕೂಪವಾಗಿದೆ.
> **- ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

> ಬಿಎಸ್‌ವೈ ಸರಕಾರದ ವಿಚಾರದಲ್ಲಿ ನಾವು ಈ ಮೊದಲು ಹೇಳುತ್ತಿದ್ದುದನ್ನು ಅವರ ಸಚಿವರೇ ಈಗ ಹೇಳಿದ್ದಾರೆ. ಈ ಬಗ್ಗೆ ಪ್ರಧಾನಿ ಗಮನ ಹರಿಸುತ್ತಾರಾ?
> **- ರಣದೀಪ್ ಸಿಂಗ್ ಸುರ್ಜೇವಾಲ**
> ರಾಜ್ಯ ಕಾಂಗ್ರೆಸ್ ಉಸ್ತುವಾರಿ

## ರಾಜ್ಯಪಾಲರಿಗೆ ಬರೆದ ಪತ್ರದಲ್ಲಿ ಸಿಎಂ ವಿರುದ್ಧ ಸಚಿವ ಈಶ್ವರಪ್ಪ ಆರೋಪ

# ಸಂಪುಟ ನಿರ್ಣಯಕ್ಕೆ ಇಲ್ಲ ಬೆಲೆ

■ **ವಿಕ ಸುದ್ದಿಲೋಕ** ಬೆಂಗಳೂರು 1/4/21

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಆರೋಪಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ಬರೆದಿರುವ ಪತ್ರವು ರಾಜಕೀಯ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ.

ಸಚಿವ ಸಂಪುಟದಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಗಾಳಿಗೆ ತೂರುವುದು, ಅನುದಾನ ಬಿಡುಗಡೆ ಮಾಡದಿರುವುದು ಸೇರಿದಂತೆ ಅನೇಕ ಆರೋಪಗಳನ್ನು ಅವರು ಪತ್ರ ಮುಖೇನ ಮಾಡಿದ್ದಾರೆ.

**ಈಶ್ವಪ್ಪ ಬರೆದ ಪತ್ರದ ಸಾರಾಂಶ ಹೀಗಿದೆ:** ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯ ಉಪೇಕ್ಷಿಸಿ ಮುಖ್ಯಮಂತ್ರಿಯವರು ತಮ್ಮದೇ ಆದ ನಿರ್ಧಾರ ಕೈಗೊಳ್ಳುತ್ತಾರೆ. ಅದಕ್ಕೆ ಬೇಕಾದಷ್ಟು ಉದಾಹರಣೆ ಕೊಡಬಹುದು ಎಂದು ದೂರಿರುವ ಈಶ್ವರಪ್ಪ, 2020-21ರ ಬಜೆಟ್ ಅನುಸಾರ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ 'ಗ್ರಾಮೀಣ ಸುಮಾರ್ಗ' ಯೋಜನೆ ಜಾರಿಗೊಳಿಸಬೇಕಿತ್ತು. 5 ವರ್ಷದಲ್ಲಿ 20 ಸಾವಿರ ಕಿ.ಮೀ ರಸ್ತೆ ಅಭಿವೃದ್ಧಿ ಈ ಯೋಜನೆಯ ಉದ್ದೇಶವಾಗಿದೆ. ಅದಕ್ಕಾಗಿ ಮೊದಲ ಹಂತದಲ್ಲಿ ಪ್ರತಿ ಕ್ಷೇತ್ರದಲ್ಲಿ 30 ಕಿ.ಮೀ ರಸ್ತೆ ಮೇಲ್ದರ್ಜೆಗೆ ಏರಿಸಲು ಬಜೆಟ್‌ನಲ್ಲಿ 780 ಕೋಟಿ ರೂ. ನಿಗದಿ ಮಾಡಲಾಗಿತ್ತು. ಆದರೆ, ಹಲವು ಬಾರಿ ಪತ್ರ ಬರೆದು ವಿನಂತಿಸಿಕೊಂಡರೂ ಈ ಯೋಜನೆಗೆ ಹಣಕಾಸು ಇಲಾಖೆಯಿಂದ ನೆರವು ಬಿಡುಗಡೆಯಾಗಲಿಲ್ಲ, ಇದರ ಕಾರಣವೂ ತಿಳಿಯಲಿಲ್ಲ ಎಂದು ಆಕ್ಷೇಪಿಸಿದ್ದಾರೆ.

**ಪತ್ರದಲ್ಲಿ ಏನಿದೆ?**

ಬಜೆಟ್ ಘೋಷಿತ ಯೋಜನೆಗೆ ಹಣ ನೀಡದಿದ್ದರೂ ವಿಶೇಷ ಅನುದಾನದ ಹೆಸರಿನಲ್ಲಿ 1,439.25 ಕೋಟಿ ರೂ. (ಕಳೆದ ಸರಕಾರ ಬಿಡುಗಡೆ ಮಾಡಿರುವ 973.80 ಕೋಟಿ ರೂ. ಹೊರತುಪಡಿಸಿ) 1,439.25 ಕೋಟಿ ರೂ.ಗೆ ಅನುಮೋದನೆ ನೀಡಲಾಗಿದೆ. ಫೆಬ್ರವರಿ 17ರಂದು 81 ವಿಧಾನಸಭೆ ಕ್ಷೇತ್ರಗಳಿಗೆ ಸಂಬಂಧಿಸಿ 775 ಕೋಟಿ ರೂ.ಗೆ ಅನುಮೋದಿಸಲಾಗಿದೆ. ಕ್ಷೇತ್ರವೊಂದಕ್ಕೆ 5 ಕೋಟಿ ರೂ.ದಿಂದ 23 ಕೋಟಿ ರೂ.ವರೆಗೂ ಹಂಚಿಕೆ ಮಾಡಲಾಗಿದೆ. ಇಷ್ಟೊಂದು ದೊಡ್ಡ ಮೊತ್ತದ ಯೋಜನೆಗೆ ಹಣಕಾಸು ಇಲಾಖೆ ಮನಬಂದಂತೆ ಸಮ್ಮತಿ ಕೊಟ್ಟಿರುವುದು ಗ್ರಾಮೀಣ ಮೂಲಸೌಕರ್ಯ ವಿಚಾರದಲ್ಲಿ ದೂರಗಾಮಿ ಪರಿಣಾಮ ಬೀರಲಿದೆ. ವಿಶೇಷ ಅನುದಾನದಡಿ 5 ಲಕ್ಷ ರೂ. ಒಳಗೆ ರಸ್ತೆ ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದೆ.

ಇದರಿಂದ ರಸ್ತೆಯ ಗುಣಮಟ್ಟದ ಮೇಲೆ ಪರಿಣಾಮವಾಗಬಹುದು. ಅಕ್ರಮದ ಆಪಾದನೆಯೂ ಬರಬಹುದು. ಗ್ರಾಮೀಣ ಭಾಗದ ಹಿತದೃಷ್ಟಿಯಿಂದ ಹೆಚ್ಚು ವರ್ಷ ಬಳಕೆಗೆ ಬರುವಂತ ರಸ್ತೆ ಇನ್ನಿತರ ಮೂಲಸೌಕರ್ಯ ನಿರ್ಮಿಸಬೇಕು. ಇದರಿಂದ ಗ್ರಾಮೀಣ ಆರ್ಥಿಕತೆಗೂ ಉತ್ತೇಜನ ಸಿಗುತ್ತದೆ. ಆದರೆ, ಈಗ ಕೈಗೊಂಡ ಕ್ರಮದಿಂದ ಗ್ರಾಮಾಭ್ಯುದಯದ ಮೂಲ ಆಶಯಕ್ಕೆ ಸೋಲಾಗಬಹುದು ಎಂದು ಸಚಿವ ಈಶ್ವರಪ್ಪ ತಮ್ಮ ದೂರಿನಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ಈವರೆಗೆ 3,998.56 ಕೋಟಿ ರೂ. ಅನುಮೋದನೆಯಾಗಿದ್ದು 1,600.42 ಕೋಟಿ ರೂ. ಮಾತ್ರ ಬಿಡುಗಡೆಯಾಗಿದೆ. ಬಿಡುಗಡೆಯಾಗದೆ ಬಾಕಿಯಿರುವ ಮೊತ್ತ 2,398.18 ಕೋಟಿ ರೂ. ಹಾಗಾಗಿ ಇಲಾಖೆಯನ್ನು ಕಡೆಗಣಿಸಲಾಗುತ್ತಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಜತೆಗೆ ಕೋವಿಡ್ ಸಂಕಷ್ಟದ ನಡುವೆಯೂ ಜನರ ತೆರಿಗೆ ದುಡ್ಡನ್ನು ಮನಸ್ಸಿಗೆ ಬಂದಂತೆ ಹಂಚಿಕೆ ಮಾಡುತ್ತಿರುವುದನ್ನು ಕಾಣಬಹುದು ಎಂದು ಗಂಭೀರ ಆರೋಪ ಮಾಡಿದ್ದಾರೆ.




## ಸಿಎಂ ವಿರುದ್ಧ ಈಶ್ವರಪ್ಪ ರೆಬೆಲ್

**ಮೊದಲ ಪುಟದಿಂದ**

ರಾಜ್ಯಪಾಲ ವಿ.ಆರ್.ವಾಲಾ ಅವರನ್ನು ಬುಧವಾರ ಭೇಟಿಯಾದ ಈಶ್ವರಪ್ಪ ಸಿಎಂ ವಿರುದ್ಧ ದೂರು ನೀಡಿದರು. 5 ಪುಟಗಳ ಪತ್ರವನ್ನು ರಾಜ್ಯಪಾಲರಿಗೆ ಹಸ್ತಾಂತರಿಸಿದರು. ಸಂಪುಟದ ಇತರ ಸದಸ್ಯರ ಇಲಾಖೆಯಲ್ಲಿ ಮುಖ್ಯಮಂತ್ರಿ ನೇರ ಹಸ್ತಕ್ಷೇಪ ಮಾಡುತ್ತಿದ್ದಾರೆ. ಇದು ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಈ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಜತೆಗೆ ಇದಕ್ಕೆ ನಿದರ್ಶನವನ್ನೂ ಒದಗಿಸಿದ್ದಾರೆ. ಇದೇ ವಿಚಾರವಾಗಿ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರಿಗೆ ಫೆ. 18ರಂದೇ ಈಶ್ವರಪ್ಪ ಪತ್ರ ಬರೆದಿದ್ದಾರೆ.